ಬೀದರ್ ಜಿಲ್ಲೆಯ ಉತ್ತರ ಮತಕ್ಷೇತ್ರಕ್ಕೆ ಅನುಷ್ಠಾನಗೊಳಿಸಿರುವ ಕಾಮಗಾರಿಗಳು

1004 (1172) ಶ್ರೀ ರಹೀಂ ಖಾನ್ (ಬೀದರ್) : ಮಾನ್ಯ ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೀನುಗಾರಿಕೆ ಇಲಾಖೆಯಿಂದ 2008 ರಿಂದ ಇಲ್ಲಿಯವರೆಗೆ ಅನುಷ್ಠಾನಗೊಳಿಸಿರುವ ಕಾಮಗಾರಿಗಳೆಷ್ಟು;

ಆ) ಇಲಾಖೆ ವತಿಯಿಂದ ಒಂದು ತಾಲ್ಲೂಕಿಗೆ 5 ರಂತೆ ಆಶ್ರಯ ಮನೆಗಳು ಮಂಜೂರಾಗಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಾದರೆ ಮನೆಗಳ ಹಂಚಿಕೆಯಾಗಿ ಫಲಾನುಭವಿಗಳಿಗೆ ಮನೆ ಕಟ್ಟಲು ಹಣ ಮಂಜೂರಾಗಿದೆಯೇ;

ಈ) ಮೀನುಗಾರರಿಗೆ ಬಲೆ (ಜಾಳಿಗೆ) ಖರೀದಿಗೆ 50 ಜನರಿಗೆ ತಲಾ 5000 ಸಾವಿರ ರೂ.ಗಳು ಸರ್ಕಾರ ಘೋಷಿಸಿದ್ದು, ಇಲ್ಲಿಯವರೆಗೆ ಬೀದರ್ (ಉತ್ತರ) ಕ್ಷೇತ್ರಕ್ಕೆ ಎಷ್ಟು ಜನರಿಗೆ ಹಣ ನೀಡಲಾಗಿದೆ?

ಶ್ರೀ ಆನಂದ ವಸಂತ ಅಸ್ನೋಟಿಕರ್ (ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) :

ಅ) ಬೀದರ್ ಜಿಲ್ಲೆಯ ಕಾರಂಜಾದಲ್ಲಿ ಮೀನುಗಾರಿಕೆ ಇಲಾಖೆಯಿಂದ 2008 ರಿಂದ ಇಲ್ಲಿಯವರೆಗೆ ವಿವಿಧ ಕಾಮಗಾರಿಗಳನ್ನು ಕೈಗೊಳ್ಳಲು ರೂ. 75.72 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

ಆ) ಹೌದು.

ಇ) ಇಲ್ಲ.

ಈ) 50 ಮೀನುಗಾರರಿಗೆ ತಲಾ ರೂ.5,000–00 ಗಳಂತೆ ಮೀನುಗಾರಿಕಾ ಸಲಕರಣೆಗಳನ್ನು ನೀಡಲು ರೂ.2.50 ಲಕ್ಷ ಬಿಡುಗಡೆಗೊಳಿಸಲಾಗಿರುತ್ತದೆ. ಸಲಕರಣೆಗಳ ಖರೀದಿ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಕೂಡಲೇ ವಿತರಿಸಲಾಗುವುದು.